ಫ್ಯಾಕ್ಸ್/Fax : 080-25586321
ಈಮೇಲ್/E-mail : ho@kspcb.gov.in
ವೆಬ್‌ಸೈಟ್/Website : http://kspcb.gov.in

☎ 25581383, 25589112
25588151, 25588270
25588142, 25586520

# ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
# Karnataka State Pollution Control Board

"ಪರಿಸರ ಭವನ", 1 ರಿಂದ 5ನೇ ಮಹಡಿಗಳು, ನಂ. 49, ಚರ್ಚ್ ಸ್ಟ್ರೀಟ್, ಬೆಂಗಳೂರು - 560 001, ಕರ್ನಾಟಕ, ಭಾರತ
"Parisara Bhavana", 1st to 5th Floor, # 49, Church Street, Bengaluru - 560 001, Karnataka, INDIA

ಸಂಖ್ಯೆ:ಮಾನಿಮಂ/88/ಆಡಎ/2014/ 886 ದಿನಾಂಕ: 27 JUN 2019

## ಅಧಿಸೂಚನೆ

ವಿಷಯ:ಮಂಡಳಿಯಲ್ಲಿನ ವಿವಿಧ ನೇರ ನೇಮಕಾತಿ ವೃಂದಗಳಿಗೆ ಇಲಾಖಾ ಪರೀಕ್ಷೆಗಳನ್ನು ನಿಗಧಿ ಪಡಿಸುವ ಬಗ್ಗೆ.

ಉಲ್ಲೇಖ:1.Board Notification No.KSPCB/EST-II/86-87/2507-13, dated:28/5/2986.

2.ದಿನಾಂಕ:10/5/2019ರಂದು ಜರುಗಿದ 224ನೇ ಮಂಡಳಿ ಸಭೆಯ ನಡವಳಿಯ (ಸಂಖ್ಯೆ:ಕರಾಮಾನಿಮಂ/224ನೇ ಮಂ.ಸ/ನಿ.ಕೋ/1242, ದಿನಾಂಕ:215/2019.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ವೃಂದ, ನೇಮಕಾತಿ ಹಾಗೂ ಸೇವಾ ಷರತ್ತು ವಿನಿಯಮಗಳು, 1992 ಹಾಗೂ ತದ ನಂತರ ತಿದ್ದುಪಡಿಗೊಂಡ ಇದೇ ವಿನಿಯಮಗಳನ್ವಯ ಸರ್ಕಾರವು ಮಂಜೂರು ಮಾಡಿರುವ ವಿವಿಧ ವೈಜ್ಞಾನಿಕ, ತಾಂತ್ರಿಕ ಮತ್ತು ತಾಂತ್ರಿಕೇತರ ನೇರ ನೇಮಕಾತಿ ಹುದ್ದೆಗಳಿಗೆ ಅನ್ವಯವಾಗುವ ಇಲಾಖಾ ಪರೀಕ್ಷೆಗಳು ಹಾಗೂ ಕನ್ನಡ ಭಾಷ ತೇರ್ಗಡೆ ಪರೀಕ್ಷೆಗಳನ್ನು ಪರೀಕ್ಷಾರ್ಥ ಅವಧಿ ಘೋಷಣೆಗಾಗಿ, ಆಯ್ಕೆ ಕಾಲಿಕ ವೇತನ ಶ್ರೇಣಿ ಮಂಜೂರಾತಿಗೆ, ಇತರೆಗಳಿಗೆ ಉಲ್ಲೇಖ (1)ರ ಅಧಿಸೂಚನೆಯಲ್ಲಿ ನಿಗಧಿ ಪಡಿಸಲಾಗಿತ್ತು. ತರುವಾಯ, ಮಂಡಳಿಯ ಕಾರ್ಯ ಚಟುವಟಿಕೆಗಳಿಗೆ ಅನುಗುಣವಾಗಿ ಹೊಸ ಹುದ್ದೆಗಳನ್ನು ಸರ್ಕಾರದ ಅನುಮೋದನೆಯನ್ವಯ ಸೃಜಿಸಲಾಯಿತು. ಆದರೆ, ಸೃಜಿಸಲಾದ ಹೊಸ ಕೆಲವು ಹುದ್ದೆಗಳಿಗೆ ಇಲಾಖಾ ಪರೀಕ್ಷೆಗಳನ್ನು ನಿಗಧಿ ಪಡಿಸಿರುವುದಿಲ್ಲ. ಇದರ ಅಗತ್ಯತೆಯನ್ನು ಮನಗಂಡು ದಿನಾಂಕ:10/5/2019ರಂದು ಜರುಗಿದ ಮಂಡಳಿ ಸಭೆಯಲ್ಲಿ ಈ ಪ್ರಸ್ತಾವನೆಯನ್ನು ಮಂಡಿಸಲಾಗಿ, ಕೂಲಂಕುಷವಾಗಿ ಚರ್ಚಿಸಿದ ಸಭೆಯು ಈ ಕೆಳಕಂಡಂತೆ ನಿರ್ಣಯಿಸಿರುತ್ತದೆ.

1. ಮಂಡಳಿಗೆ ಎರವಲು ಸೇವೆ ಹಾಗೂ ಮುಂಬಡ್ತಿ ಖೋಟಾದ ಅಧಿಕಾರಿ/ನೌಕರರನ್ನು ಬಿಟ್ಟು ನೇರ ನೇಮಕಾತಿ ಹೊಂದುವ ಎಲ್ಲಾ ವೈಜ್ಞಾನಿಕ, ತಾಂತ್ರಿಕ, ತಾಂತ್ರಿಕೇತರ ಹುದ್ದೆಗಳ ಅಧಿಕಾರಿ/ನೌಕರರಿಗೆ ಅನುಬಂಧದಂತೆ ನಮೂದಿಸಿರುವ ಇಲಾಖಾ ಪರೀಕ್ಷೆಗಳನ್ನು ನಿಗಧಿಪಡಿಸಲು/ಪರಿಷ್ಕರಣೆ ಮಾಡಲು ಹಾಗೂ ಇಲಾಖಾ ಪರೀಕ್ಷೆ ಕನ್ನಡ ಭಾಷೆಯಲ್ಲಿ ತೇರ್ಗಡೆ ಅಥವಾ ಶೈಕ್ಷಣಿಕ ವಿಧ್ಯಾಭ್ಯಾಸದಲ್ಲಿ ಪ್ರಥಮ ಭಾಷೆ ಕನ್ನಡದಲ್ಲಿ ತೇರ್ಗಡೆಯಾಗಿದ್ದರೆ ಸೇವಾ ನಿಯಮಾವಳಿಗಳ ಪ್ರಕಾರ ವಿನಾಯಿತಿ ಮುಂದುವರೆಸಲು ಅನುಮೋದಿಸಿತು.
2. ಮಂಡಳಿಯಲ್ಲಿ ಅಗತ್ಯನುಸಾರ ಸೃಜನೆಯಾಗುವ ಹೊಸ ವೃಂದಗಳಿಗೆ ಇಲಾಖಾ ಪರೀಕ್ಷೆಗಳನ್ನು ಕರ್ನಾಟಕ ನಾಗರೀಕ ಸೇವಾ/ಸೇವೆ ಮತ್ತು ಕನ್ನಡ ಭಾಷೆ ಪರೀಕ್ಷೆ ನಿಯಮಗಳು, 1974ರನ್ವಯ ಇಲಾಖಾ ಪರೀಕ್ಷೆಗಳನ್ನು ನಿಗಧಿಪಡಿಸುವ ಅಧಿಕಾರವನ್ನು ಮಂಡಳಿಯ ಅಧ್ಯಕ್ಷರಿಗೆ ಪ್ರತ್ಯಾಯೋಜಿಸಲು ಅನುಮೋದಿಸಿತು.

ಮಂಡಳಿಯ ನಿರ್ಧಾರವನ್ನಾಧರಿಸಿ, ಮಂಡಳಿಗೆ ಎರವಲು ಸೇವೆ ಹಾಗೂ ಮುಂಬಡ್ತಿ ಖೋಟಾದ ಅಧಿಕಾರಿ/ನೌಕರರನ್ನು ಬಿಟ್ಟು ನೇರ ನೇಮಕಾತಿ ಹೊಂದುವ ಎಲ್ಲಾ ವೈಜ್ಞಾನಿಕ, ತಾಂತ್ರಿಕ, ತಾಂತ್ರಿಕೇತರ ಹುದ್ದೆಗಳ ಅಧಿಕಾರಿ/ನೌಕರರಿಗೆ ಕೆಳಕಂಡ ಕೋಷ್ಟಕದಲ್ಲಿರುವಂತೆ ಇಲಾಖಾ ಪರೀಕ್ಷೆಗಳನ್ನು ಪರಿಷ್ಕರಣೆ ಮಾಡಲು ಹಾಗೂ ಇಲಾಖಾ ಪರೀಕ್ಷೆ. ಕನ್ನಡ ಭಾಷೆಯಲ್ಲಿ ತೇರ್ಗಡೆ ಅಥವಾ ಶೈಕ್ಷಣಿಕ ವಿಧ್ಯಾಭ್ಯಾಸದಲ್ಲಿ ಪ್ರಥಮ ಭಾಷೆ ಕನ್ನಡದಲ್ಲಿ ತೇರ್ಗಡೆಯಾಗಿದ್ದರೆ ಸೇವೆ ನಿಯಮಾವಳಿಗಳನ್ವಯ ವಿನಾಯಿತಿಸಲು ಈ ಮೂಲಕ ಆದೇಶಿಸಲಾಗಿದೆ.

**<u>ಕೋಷ್ಟಕ</u>**

| ಪ್ರಸ್ತುತ ಹುದ್ದೆಯ ಪದನಾಮ | ಗುಂಪು | ನಿಗದಿಪಡಿಸುತ್ತಿರುವ/ಪರಿಷ್ಕರಿಸುತ್ತಿರುವ ಇಲಾಖಾ ಪರೀಕ್ಷೆಯ ವಿಷಯಗಳು | ಷರಾ |
|---|---|---|---|
| ಮ್ಯಾನೇಜರ್ ಐ.ಟಿ | 'ಎ' | 1. ಅಕೌಂಟ್ಸ್ ಹೈಯರ್<br>2. ಜನರಲ್ ಲಾ ಭಾಗ–I ಮತ್ತು ಭಾಗ -II | ನೇರ ನೇಮಕಾತಿ |
| ಸಹಾಯಕ ಪರಿಸರ ಅಧಿಕಾರಿ | 'ಬಿ' | 1. ಅಕೌಂಟ್ಸ್ ಹೈಯರ್<br>2. ಪಿ.ಡಬ್ಲ್ಯೂಡಿ ಹೈಯರ್ ಭಾಗ–I ಮತ್ತು ಭಾಗ -II<br>3. ಜನರಲ್ ಲಾ ಭಾಗ–I ಮತ್ತು ಭಾಗ -II | ನೇರ ನೇಮಕಾತಿ |
| ಕಾನೂನು ಸಹಾಯಕ | 'ಬಿ' | 1. ಅಕೌಂಟ್ಸ್ ಹೈಯರ್<br>2. ಜನರಲ್ ಲಾ ಭಾಗ–I (ಪತ್ರಿಕೆ–2) ಮತ್ತು ಭಾಗ -II | ನೇರ ನೇಮಕಾತಿ |
| ಸಹಾಯಕ ವೈಜ್ಞಾನಿಕ ಅಧಿಕಾರಿ | 'ಬಿ' | 1. ಅಕೌಂಟ್ಸ್ ಹೈಯರ್<br>2. ಜನರಲ್ ಲಾ ಭಾಗ–I ಮತ್ತು ಭಾಗ -II | ನೇರ ನೇಮಕಾತಿ (50%) ಮತ್ತು ಮುಂಬಡ್ತಿ (50%) |
| ಸಹಾಯಕ ತೋಟಗಾರಿಕಾ ಅಧಿಕಾರಿ | 'ಬಿ' | 1. ಅಕೌಂಟ್ಸ್ ಹೈಯರ್<br>2. ಜನರಲ್ ಲಾ ಭಾಗ–I ಮತ್ತು ಭಾಗ -II | ನೇರ ನೇಮಕಾತಿ |
| ಕಿರಿಯ ಅಭಿಯಂತರ | 'ಸಿ' | 1. ಅಕೌಂಟ್ಸ್ ಹೈಯರ್<br>2. ಪಿ.ಡಬ್ಲ್ಯೂಡಿ ಹೈಯರ್ ಭಾಗ–I ಮತ್ತು ಭಾಗ -II | ನೇರ ನೇಮಕಾತಿ |
| ಶೀಘ್ರಲಿಪಿಗಾರರ | 'ಸಿ' | 1. ಅಕೌಂಟ್ಸ್ ಹೈಯರ್<br>2. ಸೆಕ್ರೆಟರಿಯಲ್ ಮ್ಯಾನ್ಯೂಲ್ (ಎರಡು ಭಾಗಗಳು)<br>3. ಸ್ಪೆಷಲ್–ಲಾ ಮತ್ತು ಸೇವಾ ನಿಯಮಗಳ ಪರೀಕ್ಷೆ (if they have not passed after Part-I or Part-II of Rev Higher) | ನೇರ ನೇಮಕಾತಿ |
| ಪ್ರಥಮ ದರ್ಜೆ ಸಹಾಯಕ | 'ಸಿ' | 1. ಅಕೌಂಟ್ಸ್ ಹೈಯರ್<br>2. ಜನರಲ್ ಲಾ ಭಾಗ–I ಮತ್ತು ಭಾಗ -II | ಮುಂಬಡ್ತಿ (80%) ನೇರ ನೇಮಕಾತಿ(20%) |
| ದ್ವಿತೀಯ ದರ್ಜೆ ಸಹಾಯಕ | 'ಸಿ' | 1. ಅಕೌಂಟ್ಸ್ ಲೋಯರ್ | ನೇರ ನೇಮಕಾತಿ (80%) ಮುಂಬಡ್ತಿ (20%) |
| ಡಾಟ ಎಂಟ್ರಿ ಆಪರೇಟರ್ | 'ಸಿ' | 1. ಅಕೌಂಟ್ಸ್ ಹೈಯರ್<br>2. ಜನರಲ್ ಲಾ ಭಾಗ–I ಮತ್ತು ಭಾಗ -II | ಮುಂಬಡ್ತಿ |
| ಕಿರಿಯ ಡಾಟ ಎಂಟ್ರಿ ಆಪರೇಟರ್ | 'ಸಿ' | 1. ಅಕೌಂಟ್ಸ್ ಲೋಯರ್ | ನೇರ ನೇಮಕಾತಿ |
| ಹಿರಿಯ ಕ್ಷೇತ್ರ ಸಹಾಯಕ | 'ಸಿ' | 1. ಅಕೌಂಟ್ಸ್ ಹೈಯರ್<br>2. ಜನರಲ್ ಲಾ ಭಾಗ–I ಮತ್ತು ಭಾಗ -II | ಮುಂಬಡ್ತಿ |
| ಕ್ಷೇತ್ರ ಸಹಾಯಕ | 'ಸಿ' | 1. ಅಕೌಂಟ್ಸ್ ಲೋಯರ್ | ನೇರ ನೇಮಕಾತಿ |

ಮತ್ತು ಮಂಡಳಿಯಲ್ಲಿ ಅಗತ್ಯನುಸಾರ ಇನ್ನು ಮುಂದೆ ಸೃಜನೆಯಾಗುವ ಹೊಸ ವೃಂದಗಳಿಗೆ ಕರ್ನಾಟಕ ನಾಗರೀಕ ಸೇವಾ/ಸೇವೆ ಮತ್ತು ಕನ್ನಡ ಭಾಷೆ ಪರೀಕ್ಷೆ ನಿಯಮಗಳು, 1974 ರನ್ವಯ ಇಲಾಖಾ ಪರೀಕ್ಷೆಗಳನ್ನು ನಿಗಧಿ ಪಡಿಸುವ ಅಧಿಕಾರವನ್ನು ಮಂಡಳಿಯ ಅಧ್ಯಕ್ಷರಿಗೆ ಈ ಮೂಲಕ ಪ್ರತ್ಯಾಯೋಜಿಸಲಾಗಿದೆ.

ಮುಂದುವರೆದಂತೆ, ಉಲ್ಲೇಖಿತ (1)ರ ಅಧಿಸೂಚನೆಯಲ್ಲಿನ ಇತರೆ ಎಲ್ಲಾ ಷರತ್ತುಗಳು ಯಥಾವತ್ತಾಗಿ ಮುಂದುವರೆಯುತ್ತದೆಯೆಂದು ತಿಳಿಯತಕ್ಕದ್ದು.

21/6/19

ಅಧ್ಯಕ್ಷರು
ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

7/8/6

ಪ್ರತಿಗಳು:

1. ಮಂಡಳಿಯ ಎಲ್ಲಾ ಕಛೇರಿ/ವಿಭಾಗಗಳ ಮುಖ್ಯಸ್ಥರ ಮಾಹಿತಿಗೆ ಹಾಗೂ ತಮ್ಮ ಅಧೀನದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಯ ಮಾಹಿತಿಗೆ ತರಲು.
2. ಮಂಡಳಿಯ ಎಲ್ಲಾ ಅಧಿಕಾರಿ/ನೌಕರರ ಮಾಹಿತಿಗೆ.
3. ವ್ಯವಸ್ಥಾಪಕರು ಐಟಿ ಇವರಿಗೆ ಮಂಡಳಿಯ ಜಾಲತಾಣದಲ್ಲಿ ಪ್ರಕಟಿಸಲು.
4. ಸೂಚನಾ ಫಲಕ/ಹೆಚುವರಿ ಪ್ರತಿ/ಇತರೇ.